info@buntsanghablr.com
buntsanghabangalore@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಸೆಪ್ಟೆಂಬರ್ 2025
ಸಂಪುಟ 21 ಸಂಚಿಕೆ 9

ಸಂಚಿಕೆ ಬೆಲೆ ರೂ. 1/–





ಪ್ರಾರ್ಥನಾ ಮಂದಿರ ಸಮಿತಿ – ಗಣೇಶ ಚತುರ್ಥಿ ಆಚರಣೆ






ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ I ಮತ್ತು II ರಲ್ಲಿ ಸ್ವಾತಂತ್ರ್ಯ ದಿನಾಚರಣೆ

## ಕೃಷಿ ಸಂಸ್ಕೃತಿಯ ಬಿಂಬ: ಕದಿರು ಹಬ್ಬ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 324, Bunts' Sangha Complex, Chord Road, Vijayanagar, Bengaluru - 40.
Phone : 080-23399323 | 23399636 | Email : info@buntsanghablr.com

# ತುಳುಕೂಟ, ಬೆಂಗಳೂರು (ರಿ)

## 2025-2027 ಸಾಲಿನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿರುವ ನಮ್ಮ ಬಂಟ ಬಾಂಧವರಿಗೆ ಅಭಿನಂದನೆಗಳು



**ಸುಂದರ್ ರಾಜ್ ರೈ**
ಅಧ್ಯಕ್ಷರು



ಹೆಚ್. ವಿ. ಶ್ರೀನಿವಾಸ ಸೂಡ
ಉಪಾಧ್ಯಕ್ಷರು



ಶೋಭಾ ಎನ್. ಶೇಖ
ಉಪಾಧ್ಯಕ್ಷರು



ಶ್ರೀಮತಿ ನವೀನ ಶೆಟ್ಟಿ
ಜೊತೆ ಕಾರ್ಯದರ್ಶಿ

### ಕಾರ್ಯಕಾರಿ ಸಮಿತಿ ಸದಸ್ಯರು



ಡಾ॥ ಭಗವಾನ್ ದಾಸ್ ಆಳ್ವ



ಸತ್ಯಾನಂದ ಮೇಲಂಟ



ಕೆ. ಜಗನ್ನಾಥ ಶೆಟ್ಟಿ



ರವೀಂದ್ರನಾಥ ಮಾರ್ಲ



ಉಮೇಶ್ ರೈ ನಡುಬೈಲ್



ಡಾ॥ ಜಗದೀಶ್ ಶೆಟ್ಟಿ



ಡಿ ಪಿ ಗಣೇಶ್



ಸುಧಾಕರ ಶೆಟ್ಟಿ



ಹೊನ್ನೆಕೆರೆ ಸುಧಾಕರ ಶೆಟ್ಟಿ



ಅರುಣಾ ರಾಮದಾಸ್ ಶೆಟ್ಟಿ



ಲೀಲಾವತಿ ಶೆಟ್ಟಿ

ADVT.

# ಸ್ನೇಹ ಚಿಂತನೆ

*Monthly Magazine Published by*

## BUNTS' SANGHA BANGALORE

VOL - 21 SEPTEMBER - 2025 ISSUE - 9



**ಸಾಹಿತ್ಯ ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ


## ಒಳ ಪುಟಗಳಲ್ಲಿ.....


| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ, ಗಣೇಶ ಚತುರ್ಥಿ ಆಚರಣೆ | 6 |
| ಆರ್.ಎನ್.ಎಸ್ ವಿದ್ಯಾನಿಕೇತನ–II, ಕೃಷ್ಣ ಜನ್ಮಾಷ್ಟಮಿ ಆಚರಣೆ | 8 |
| ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್‌ನ 28ನೇ ವಾರ್ಷಿಕೋತ್ಸವ | 9 |
| Annual Sports Meet – 2025 | 10 |
| ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ – 2025–26 | 11 |
| ಕ್ರೀಡಾ ವಿಭಾಗ – ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2025–26 | 14 |
| ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II ಸ್ವಾತಂತ್ರ್ಯ ದಿನಾಚರಣೆಯ ವರದಿ | 20 |
| R.N.S VIDYANIKETAN - Report On Shri Krishna Janmashtami Celebration by preprimary wing. | 21 |
| Bunts' Sangha RNS Vidyaniketan Report on Independence Day Celebration | 22 |
| ಬಂಟರ ಸಂಘ ಬೆಂಗಳೂರು–ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26 | 24 |


**ಮುಖ ಪುಟ**

ಪ್ರಾರ್ಥನಾ ಮಂದಿರ ಸಮಿತಿ– ಗಣೇಶ ಚತುರ್ಥಿ ಆಚರಣೆ

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ I ಮತ್ತು II ರಲ್ಲಿ ಸ್ವಾತಂತ್ರ್ಯ ದಿನಾಚರಣೆ


ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

# ಸಂಪಾದಕೀಯ



## ಕೃಷಿ ಸಂಸ್ಕೃತಿಯ ಬಿಂಬ: ಕದಿರು ಹಬ್ಬ

ನವರಾತ್ರಿಯ 9 ದಿನಗಳ ಅವಧಿಯಲ್ಲಿ ಇಲ್ಲವೇ ನವರಾತ್ರಿ ತಡವಾಗಿ ಬಂದರೆ ಅನಂತಚತುರ್ದಶಿಗೆ ಹೊಂದಿಕೊಂಡಂತೆ ಆಚರಿಸುವ ಹಬ್ಬವೇ ಕದಿರು ಹಬ್ಬ. ಮನೆಯ ಒಳಹೊರಗಿನ ಬಹುಭಾಗಗಳು ಹೊಸ ಕದಿರಿನಿಂದ ಶೃಂಗಾರಗೊಳ್ಳುವ ವಿಶಿಷ್ಟ ಆಚರಣೆ ಇದು. ಕದಿರು ಹಬ್ಬವನ್ನು ಕರಾವಳಿಯ ಕನ್ನಡ ಭಾಷಿಕ ಪ್ರದೇಶದಲ್ಲಿ ಹೊಸ್ತು ಎಂಬುದಾಗಿ ಕರೆಯಲಾಗುತ್ತದೆ. ಇದು ಹೊಸ ಬೆಳೆಯನ್ನು ಆಹ್ವಾನಿಸುವ ಹಬ್ಬವಾಗಿದೆ. ಹೊಸಭತ್ತದ ಕಾಳುಗಳನ್ನು ಸುಲಿದು ಹಳೆ ಅಕ್ಕಿಯ ಜೊತೆ ಸೇರಿಸಿ ಅನ್ನ ಮಾಡಿ ಹಳತನ್ನು ಹೊಸತಾಗಿಸಿಕೊಳ್ಳುವ ಸಂಭ್ರಮದ ಆಚರಣೆ ಇದಾಗಿದೆ. ಇದನ್ನು ಊರಿನವರೆಲ್ಲರೂ ಸಾಮೂಹಿಕವಾಗಿ ಒಂದೇ ದಿನ ಆಚರಿಸುವುದು ರೂಢಿ. ಊರ ದೈವದ ಮನೆ, ಗರೋಡಿ ಅಥವಾ ದೇವಸ್ಥಾನಗಳಿಗೆ ಕದಿರು ಕಟ್ಟಿದ ದಿನದಂದು ಆ ಊರಿನವರು ತಮ್ಮ ಮನೆಗಳಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ತಮ್ಮದೇ ಅಥವಾ ಇತರರ ಗದ್ದೆಯಿಂದ ತಂದ ಕದಿರನ್ನು ಬೆಳಗಾಗುತ್ತಲೇ ಕೊಯ್ದು ಹೊರಗಟ್ಟಿದಂತೆ ಕಟ್ಟಿ, ಶಂಖ ಜಾಗಟೆ ಬಾರಿಸಿಕೊಳ್ಳುತ್ತಾ ಹೊತ್ತು ತಂದು ಮೇಟಿಯ ಮುಂದೆ ಇಳಿಸಿ ಪೂಜೆ ಸಲ್ಲಿಸಲಾಗುತ್ತದೆ. ತದನಂತರದಲ್ಲಿ ಮೇಟಿಗೆ ಮೊದಲ ಕದಿರು ಕಟ್ಟಿ ಮನೆಯ ಒಳಗೆ ತರುತ್ತಾರೆ. ಕೆಲವೆಡೆ ತುಳಸಿ ಕಟ್ಟೆಯ ಮುಂದೆ ಮೊದಲಾಗಿ ಕದಿರು ಕಟ್ಟಿ ಮನೆಗೆ ತರುವ ಕ್ರಮವಿದೆ. ಮತ್ತೆ ಕೆಲವರು ಊರಗುಡಿಯಲ್ಲಿ ಕೊಯ್ದು ತಂದಿರಿಸಿದ ಕದಿರನ್ನು ಪ್ರಸಾದ ರೂಪದಲ್ಲಿ ಮನೆಗೆ ತಂದು ಕಟ್ಟಿಕೊಳ್ಳುತ್ತಾರೆ.

ಈ ಕದಿರನ್ನು ಕಟ್ಟುವ ಕ್ರಮವೇ ಕೃಷಿ ಸಂಸ್ಕೃತಿಯ ಬಿಂಬದಂತೆ ಕಂಗೊಳಿಸುತ್ತದೆ. ಕದಿರನ್ನು ಹಲಸು ಮತ್ತು ಮಾವಿನ ಎಲೆಯ ಮೇಲಿರಿಸಿ, ಎಲೆಗಳ ಬುಡದಿಂದ ಅದರ ಅರ್ಧಭಾಗದವರೆಗೆ ಮಡಚಿ ನಂತರ ಬಲ ಮತ್ತು ಎಡಭಾಗಗಳನ್ನು ಮಡಚಿ ಗಂಟೆಯಾಕಾರಕ್ಕೆ ತಂದು ಅದನ್ನು ನಾರು ಇಲ್ಲವೇ ತೆಂಗಿನ ಗರಿಯಿಂದ ಅಣಿಗೊಳಿಸಿಕೊಂಡ ವಸ್ತುವಿನಿಂದ (ನಾರಿನಿಂದ) ಕಟ್ಟಿ ಮನೆಯ ಬಾಗಿಲು, ಮೇಜು, ಕುರ್ಚಿಯ ಕಾಲುಗಳು, ನೇಗಿಲು, ನೊಗ, ತುರಿಮಣೆ, ಮರಮಟ್ಟುಗಳಿಗೆ ಕಟ್ಟಲಾಗುತ್ತದೆ. ಈ ಆಚರಣೆಯ ಇನ್ನೊಂದು ವೈಶಿಷ್ಟ್ಯವೆಂದರೆ ಬಡವ–ಬಲ್ಲಿದ, ಭೂಮಿ ಇರುವವರು–ಇರದವರೆನ್ನುವ ಪರಿಭೇದವಿಲ್ಲದೆ ಕೃಷಿಯ ಜೊತೆಗೆ ಯಾವುದಾದರೊಂದು ವಿಧದಲ್ಲಿ ಬದುಕು ಕಟ್ಟಿಕೊಂಡ ಎಲ್ಲರೂ ಆಚರಿಸುತ್ತಾರೆ. ಆದ್ದರಿಂದ ಇದೊಂದು ಸಾಮೂಹಿಕ ಸಂಭ್ರಮಾಚರಣೆಯಾಗಿದೆ. ಆದರೆ ಎಲ್ಲಾ ಊರುಗಳಲ್ಲಿಯೂ ಈ ಆಚರಣೆ ಒಂದೇ ದಿನ ನಡೆಯುವುದಿಲ್ಲ. ದಿನ ನಿಗದಿಯ ಮುಕ್ತತೆಯನ್ನು ಆಯಾ ಊರಿನವರೇ ಉಳಿಸಿಕೊಂಡಿರುತ್ತಾರೆ.

ಕದಿರು ಹಬ್ಬದ ಅಡುಗೆ ಮೂಲತಃ ಶಾಖಾಹಾರಿ ಮಾದರಿಯದು. ಈ ದಿನ ಸುಮಾರು ಒಂಭತ್ತು ಬಗೆಯ ತರಕಾರಿಗಳನ್ನು ಬಳಸುತ್ತಾರೆ. ಇವುಗಳಲ್ಲಿ ಕೆಸವು, ಹರಿವೆ, ಬಣ್ಣದ ಸೌತೆ, ಮುಳ್ಳುಸೌತೆ ಮತ್ತು ಮರಸಾಣ್ ಗಡ್ಡೆಗಳು ಸಾಮಾನ್ಯವಾಗಿ ಇರುತ್ತವೆ. ಅಂದಿನ ಅಡುಗೆಯಲ್ಲಿ ಮಾಡುವ ತರಕಾರಿಯ ಖಾದ್ಯಗಳಲ್ಲಿ ಹುಳಿ, ಸಾರು, ಪಲ್ಯ, ಪಾಯಸ ಇತ್ಯಾದಿ ವೈವಿಧ್ಯಗಳಿವೆ. ಕಡಲೆ ಮತ್ತು ಮರಸಾಣ್ ಗಡ್ಡೆಗಳನ್ನು ಸೇರಿಸಿದ ಕಡ್ಲೆಹುಳಿ, ಬಣ್ಣದ ಸೌತೆಯನ್ನು ಬಳಸಿದ ಸಿಹಿಯೆನಿಸುವ ಸೌತೆಕಾಯಿ ಹುಳಿ–ಈ ದಿನದ ವೈಶಿಷ್ಟ್ಯ. ಇನ್ನು ಕೆಸವು, ಸೌತೆ, ಹರಿವೆಗಳ ಪಲ್ಯಗಳು ಅಂದಿನ ಊಟಕ್ಕೆ ಮೆರುಗು ನೀಡುತ್ತವೆ. ಹೀಗೆ ಹಲವು ಬಗೆಗಳ ಅಡುಗೆಯ ಕೇಂದ್ರಭಾಗ. ಈ ಅನ್ನ ಮಾಡುವ ಮಡಕೆಗೆ ಅಂದಿನ ವಿಶೇಷ ಗೌರವವಿದೆ. ಆ ಮಡಕೆಗೆ ಶೇಡಿ ಬರೆದು ಹಳತನ್ನು ಹೊಸತಾಗಿಸಿಕೊಂಡ ನಂತರವೇ ಅದನ್ನು ಒಲೆಯ ಮೇಲಿರಿಸಲಾಗುತ್ತದೆ. ಈ ಅನ್ನವು ಬಿಳಿಯಕ್ಕಿಯ ಅನ್ನವೇ ಆಗಿದ್ದು, ಆ ಮಡಕೆಗೆ ಒಂಭತ್ತು ಇಲ್ಲದೆ ಇಪ್ಪತ್ತೊಂದು ಹೊಸಭತ್ತದ ಕಾಳುಗಳನ್ನು ಸುಲಿದುಹಾಕಿ ಅನ್ನವನ್ನು ಸಿದ್ಧಪಡಿಸಲಾಗುತ್ತದೆ. ಕದಿರು ಹಬ್ಬ ಅಥವಾ ಹೊಸ್ತಿನ ಊಟವೆಂದರೆ ಈ ಹೊಸ ಅನ್ನದ ಊಟ ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಹಣೆಗೆ ಗಂಧ ಮತ್ತು ಕೆಂಪು ಬೊಟ್ಟುಗಳನ್ನಿರಿಸಿ, ಹೊಸತನ್ನು ಉಣ್ಣುವುದಾಗಿ ಹಿರಿಯರಿಗೆ ಹೇಳಿ, ಅವರ ಆಶೀರ್ವಾದ ಪಡೆದು ಊಟ ಮಾಡುವುದು ಕ್ರಮ.

ಹೀಗೆ ಕದಿರು ಹಬ್ಬ ಕರ್ನಾಟಕ ಕರಾವಳಿ ಭಾಗದ ಒಂದು ಅನನ್ಯ ಸಾಂಸ್ಕೃತಿಕ ಆಚರಣೆಯಾಗಿದ್ದು ಕೃಷಿಕರ ಬದುಕಿನ ಮಹತ್ವದ ಭಾಗವಾಗಿದೆ.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**ಅಜ್ಞಾನ ತಿಮಿರಾನ್ಧಸ್ಯ ಜ್ಞಾನಶಾಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರುವೇ ನಮ: ॥**

**ಅಜ್ಞಾನದ ಕತ್ತಲೆಯಲ್ಲಿ ಕುರುಡರಾದವರಿಗೆ, ಜ್ಞಾನವೆಂಬ ಔಷಧದಿಂದ ಕಣ್ಣು ತೆರೆಸುವ ಗುರುವೃಂದದವರಿಗೆ ನಮನಗಳು.**

**ಪ್ರಿಯ ಸದಸ್ಯರೇ,**

**ಎಲ್ಲರಿಗೂ ನವರಾತ್ರಿ ಹಬ್ಬದ ಹಾರ್ದಿಕ ಶುಭಾಷಯಗಳು.**

ನಮ್ಮ ಸಮುದಾಯವು ಸದಾ ಸಂಸ್ಕೃತಿಯ ಪರಂಪರೆ ಮತ್ತು ಶಿಕ್ಷಣದ ಪ್ರಗತಿಯನ್ನು ಒಟ್ಟಾಗಿ ಕೈಗೂಡಿಸಿಕೊಂಡು ಸಾಗುತ್ತಿದೆ. ಕಳೆದ ತಿಂಗಳು ನಾವೆಲ್ಲರೂ ಸೇರಿ ಚೌತಿ ಹಬ್ಬವನ್ನು ಶ್ರದ್ಧೆ, ಭಕ್ತಿ–ಭಾವದಿಂದ ಆಚರಿಸಿದ್ದೇವೆ. ಈ ಹಬ್ಬವು ನಮ್ಮ ಕುಟುಂಬಗಳನ್ನು ಒಂದುಗೂಡಿಸುವುದರೊಂದಿಗೆ, ಭಕ್ತಿ, ಸಂಸ್ಕೃತಿಗಳ ಮಹತ್ವವನ್ನು ಸಾರುತ್ತ, ಮಕ್ಕಳಿಗೆ ಸಂಸ್ಕಾರದ ಪಾಠವನ್ನು ಕಲಿಯುವ ಜೊತೆಗೆ ನಮ್ಮ ಸಂಸ್ಕೃತಿಯ ಅರಿವನ್ನು ಮೂಡಿಸಿ ಭಕ್ತಿ ಭಾವನೆಯನ್ನು ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಈ ಹಬ್ಬವನ್ನು ಯಶಸ್ವಿಯಾಗಿ ಆಚರಿಸಲು ಶ್ರಮಿಸಿದ ಹಾಗೂ ಭಾಗವಹಿಸಿದ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ಧನ್ಯವಾದಗಳು.

ಶಿಕ್ಷಣ ಕ್ಷೇತ್ರದಲ್ಲಿ ಹೊಸದಾಗಿ ಬಂದಿರುವ ಸಿಹಿ ಸುದ್ದಿ ನಮ್ಮೆಲ್ಲರ ಹೆಮ್ಮೆ. ನಮ್ಮ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II ಶಾಲೆಗೆ ಅಧಿಕೃತವಾಗಿ ಸಿಬಿಎಸ್ಇ ಪರವಾನಗಿ ದೊರೆತಿದೆ. ಈ ಯಶಸ್ಸನ್ನು ತಂದುಕೊಟ್ಟಿರುವ ನಮ್ಮ ಸಂಪೂರ್ಣ ತಂಡಕ್ಕೆ ನಾನು ವಿಶೇಷವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಮುಂದಿನ ದಿನಗಳಲ್ಲಿ ನಮ್ಮ ಶಾಲೆಯ ಮಕ್ಕಳ ಭವಿಷ್ಯವನ್ನು ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವಂತೆ ರೂಪಿಸುವ ಉದ್ದೇಶದಿಂದ, ನಮ್ಮ ಶಾಲೆಯಲ್ಲಿ ಕೃತಕ ಬುದ್ಧಿಮತ್ತೆ (AI) ಮತ್ತು ರೋಬೋಟಿಕ್ಸ್ ಶಿಕ್ಷಣವನ್ನು ಪರಿಚಯಿಸಲು ಸಿದ್ಧತೆ ನಡೆಸುತ್ತಿದ್ದೇವೆ. ಇಂತಹ ಕಾರ್ಯಕ್ರಮಗಳು ನಮ್ಮ ಮಕ್ಕಳಲ್ಲಿ ಸೃಜನಶೀಲತೆ, ಹೊಸ ಆವಿಷ್ಕಾರದ ಸಾಮರ್ಥ್ಯ ಮತ್ತು ವಿಶ್ವ ಮಟ್ಟದ ಸ್ಪರ್ಧಾತ್ಮಕ ಮನೋಭಾವ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ನಾವು ಒಂದು ಕಡೆ ಸಂಸ್ಕೃತಿಯ ಮೌಲ್ಯಗಳನ್ನು ಕಾಪಾಡಿಕೊಂಡು ಹೋಗುತ್ತಿದ್ದೇವೆ. ಇನ್ನೊಂದೆಡೆ ತಂತ್ರಜ್ಞಾನ ಜ್ಞಾನದ ಮೂಲಕ ಮುಂದಿನ ಪೀಳಿಗೆಯನ್ನು ಭವಿಷ್ಯಕ್ಕೆ ಸಜ್ಜುಗೊಳಿಸುತ್ತಿದ್ದೇವೆ. ಇದೇ ನಮ್ಮ ಸಮುದಾಯದ ಧ್ಯೇಯೋದ್ದೇಶ. ನಾವೆಲ್ಲರೂ ಒಟ್ಟಾಗಿ ಬಲಿಷ್ಠ ಮತ್ತು ಪ್ರಗತಿಪರ ಸಮುದಾಯವನ್ನು ನಿರ್ಮಿಸಿ, ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯವನ್ನು ಒದಗಿಸುವಲ್ಲಿ ಶ್ರಮಿಸೋಣ.

**ಇಂತಿ ತಮ್ಮ ಪ್ರೀತಿಯ**
**ಸಿ.ಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



## ಸದಸ್ಯರೆಲ್ಲರಿಗೂ ನವರಾತ್ರಿ ಹಬ್ಬದ ಶುಭಾಶಯಗಳು.

**ಮಾನ್ಯ ಸದಸ್ಯರೇ,**

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ರ ಶಾಲಾ ಕ್ಯಾಂಪಸ್ ಮತ್ತು ತರಗತಿಗಳಿಗೆ 113 ಸಿಸಿ ಟಿವಿಗಳನ್ನು ಹಾಗೂ ಶಾಲಾ ತರಗತಿಗಳಿಗೆ ಹೊಸದಾಗಿ 27 ಸ್ಮಾರ್ಟ್ ಬೋರ್ಡ್‌ಗಳನ್ನು ಅಳವಡಿಸಲಾಗಿದ್ದು, ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ – II ಶಾಲಾ ತರಗತಿಗಳಿಗೆ ಹೊಸದಾಗಿ 08 ಸ್ಮಾರ್ಟ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ. ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಯಿಂದ ಸಿಬಿಎಸ್‌ಇ ಅಫಿಲಿಯೇಶನ್‌ಗಾಗಿ ಎನ್.ಓ.ಸಿಯನ್ನು ಪಡೆದು, ಅಫಿಲಿಯೇಶನ್ ಇನ್ಸ್‌ಪೆಕ್ಷನ್ ನಂತರ ಇದೀಗ ದಿನಾಂಕ 03.09.2025ರಂದು ಸಿಬಿಎಸ್‌ಇ ಅಫಿಲಿಯೇಶನ್ ಸರ್ಟಿಫಿಕೇಟ್ ಸಿಕ್ಕಿರುವುದು ಸಂತೋಷದಾಯಕವಾಗಿದೆ.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು II ರಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿಜಯನಗರ ಶಾಲಾ ಸಂಕೀರ್ಣದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸಂತೋಷ್ ಜಿ.ಆರ್ ರವರು ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಧ್ವಜಾರೋಹಣವನ್ನು ನೆರವೇರಿಸಿದರು. ಯಲಚಗುಪ್ಪೆ ಶಾಲಾ ಸಂಕೀರ್ಣದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಸುಭೇದಾರ್ ಸುರ್ಜಿತ್ ಸಿಂಗ್‌ರವರು ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಧ್ವಜಾರೋಹಣವನ್ನು ನೆರವೇರಿಸಿದರು.

ದಿನಾಂಕ 27.08.2025ರಂದು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ವರ್ಷಂಪ್ರತಿಯಂತೆ ಈ ವರ್ಷವೂ ಗಣೇಶ ಚೌತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ, ಸಂಚಾಲಕರಾದ ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು ಹಾಗೂ ಸಹಕರಿಸಿದ ಎಲ್ಲಾ ದಾನಿಗಳಿಗೂ ಧನ್ಯವಾದಗಳು.

ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ಗಣೇಶ ಚತುರ್ಥಿಯಂದು "ವೀರಮಣಿ" ಕಾಳಗ ಯಕ್ಷಗಾನವನ್ನು ಆಯೋಜಿಸಲಾಯಿತು. ದಿನಾಂಕ 06.09.2025ರಂದು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–2ರಲ್ಲಿ ಪುರುಷರ ಮತ್ತು ಮಕ್ಕಳ ಯಕ್ಷಗಾನ ತರಬೇತಿ ತರಗತಿಯ ಉದ್ಘಾಟನೆಯನ್ನು ಆನಗಳ್ಳಿ ಶ್ರೀ ಕರುಣಾಕರ ಹೆಗ್ಡೆಯವರು ನೆರವೇರಿಸಿದರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಚರಣ್‌ರಾಜ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ದಿನಾಂಕ 06.09.2025ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಶಿಕ್ಷಕರ ದಿನಾಚರಣೆಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಎಲ್ಲಾ ಶಿಕ್ಷಕರಿಗೂ ಗೌರವವನ್ನು ಸಲ್ಲಿಸಲಾಯಿತು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ಕ್ರೀಡಾ ಸಮಿತಿಯ ವತಿಯಿಂದ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಮತ್ತು ಸಾಂಸ್ಕೃತಿಕ ಸಮಿತಿಯ ವತಿಯಿಂದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದಿನಾಂಕ 02.11.2025ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ದೀಪಾವಳಿಯನ್ನು ಆಚರಿಸಲಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ದೀಪಾವಳಿ ಸಂಭ್ರಮಾಚರಣೆ

**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

**ದಿನಾಂಕ 01.11.2025, ಶನಿವಾರ, ಸಂಜೆ 4.00ರಿಂದ**

**ಕಾರ್ಯಕ್ರಮಗಳು :–**

- ದೀಪಾವಳಿ ಸಂಭ್ರಮಕ್ಕೆ ಚಾಲನೆ
- ಕನ್ನಡ ನಾಟಕ – ಶಿವದೂತ ಗುಳಿಗ

**ದಿನಾಂಕ: 02.11.2025, ಭಾನುವಾರ, ಸಮಯ: ಬೆಳಿಗ್ಗೆ 9.30ರಿಂದ**

**ಕಾರ್ಯಕ್ರಮಗಳು:–**

- ಅಂತರ್ ಬಂಟರ ಸಂಘಗಳ ಸಾಂಸ್ಕೃತಿಕ ಸ್ಪರ್ಧೆ
- ನೃತ್ಯ ರೂಪಕ – ಬೆಂಗಳೂರು ಬಂಟರ ಸಂಘದ ಸದಸ್ಯರಿಂದ
- ದೀಪಾವಳಿ ಆಚರಣೆ (ಅಂಗಡಿ ಪೂಜೆ, ಗೋಪೂಜೆ, ತುಳಸಿ ಪೂಜೆ)
- ಸಭಾ ಕಾರ್ಯಕ್ರಮ
- ಗೀತಾ ಸಾಹಿತ್ಯ ವೈವಿಧ್ಯ – ಶ್ರೀ ವಿಠ್ಠಲ್ ನಾಯಕ್
- ಸಾಂಸ್ಕೃತಿಕ ಕಾರ್ಯಕ್ರಮಗಳು

**ತಮಗೆ ಆದರದ ಸ್ವಾಗತ**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸರ್ವ ಸದಸ್ಯರು ಬಂಟರ ಸಂಘ ಬೆಂಗಳೂರು**

## ಬಂಟರ ಸಂಘ ಬೆಂಗಳೂರು

# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ, ಗಣೇಶ ಚತುರ್ಥಿ ಆಚರಣೆ

ದಿನಾಂಕ 27.08.2025, ಬುಧವಾರದಂದು ಗಣೇಶ ಚತುರ್ಥಿ ಆಚರಣೆಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಗಣೇಶ ಮೂರ್ತಿಯ ಪ್ರತಿಷ್ಠಾಪನೆಯೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.

ಸಂಕೀರ್ಣದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ಆಯೋಜಿಸಿದ ಎಲ್ಲಾ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನೆರವೇರಿತು. ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ. ದಂಪತಿ, ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ದಂಪತಿ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯಿತು.



ಬೆಳಿಗ್ಗೆ 8.00 ಗಂಟೆಗೆ ವಿನಾಯಕನಿಗೆ ವಿಶೇಷ ಪಂಚಾಮೃತ ಅಭಿಷೇಕ, ಬೆಳಿಗ್ಗೆ 9.30 ರಿಂದ ಸಂಘದ ಶ್ರೀ ವರಸಿದ್ಧಿ ವಿನಾಯಕ ಭಜನಾ ತಂಡದಿಂದ ಮತ್ತು ಯಲಚಗುಪ್ಪೆ ಶಾಲೆಯ ಭಜನಾ ತರಗತಿಯ ಮಕ್ಕಳಿಂದ ಮತ್ತು ಭಜನಾ ತರಬೇತುದಾರದಿಂದ ಭಜನಾ ಕಾರ್ಯಕ್ರಮವು ನಡೆಯಿತು. ಬೆಳಿಗ್ಗೆ 10.30ಕ್ಕೆ ಮಂದಿರದ ಮುಂಭಾಗದಲ್ಲಿ ಗಣೇಶ ಮೂರ್ತಿಯ ಪ್ರತಿಷ್ಠಾಪನೆ, ಗಣಹೋಮ ಹಾಗೂ ಕಲ್ಪೋಕ್ತ ಪೂಜೆಯನ್ನು ನೆರವೇರಿಸಲಾಯಿತು. ಮಹಾಪೂಜೆಯ ನಂತರ ಅನ್ನರಾಶಿ ಪೂಜೆಯನ್ನು ನೆರವೇರಿಸಲಾಯಿತು. ಮಧ್ಯಾಹ್ನ ಸುಮಾರು 3000ಕ್ಕೂ ಅಧಿಕ ಭಕ್ತಾದಿಗಳಿಗೆ ಭೋಜನ ಪ್ರಸಾದವನ್ನು ಏರ್ಪಡಿಸಲಾಯಿತು. ಗಣೇಶ ಚತುರ್ಥಿ ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ದಾನಿಗಳನ್ನು ಮಂದಿರದಲ್ಲಿ ಗಣೇಶ ಪ್ರಸಾದವನ್ನು ನೀಡಿ ಅಭಿನಂದಿಸಲಾಯಿತು. ನಂತರ ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದ್ದ "ವೀರಮಣಿ ಕಾಳಗ" ಯಕ್ಷಗಾನವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಯಕ್ಷಗಾನ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರವನ್ನು ನೀಡಿದ ಸಂಘದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಹಾಗೂ ಯಕ್ಷಗಾನ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.



ಸಂಜೆ 6.00ಕ್ಕೆ ಶ್ರೀರಾಮ ಭಜನಾ ಮಂಡಳಿ ವಿಜಯನಗರ ಮತ್ತು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ –2 ಶಾಲೆಯ ಭಜನಾ ತರಗತಿಯ ಮಕ್ಕಳ ಕುಣಿತ ಭಜನೆಯು ಜನಮನ ಸೆಳೆಯಿತು.

ಸಂಜೆ 7.00ಕ್ಕೆ ಗಣೇಶನ ಮೆರವಣಿಗೆ ಚೆಂಡೆ, ವಾದ್ಯ, ಕುಣಿತದೊಂದಿಗೆ ಬಂಟರ ಸಂಘದ ಆವರಣದಿಂದ ಹೊರಟು ವಿಜಯನಗರದ ಮತ್ತು ಚಂದ್ರಾ ಲೇಔಟ್ ಸುತ್ತಮುತ್ತ ತಿರುಗಿ ಚಂದ್ರಾ ಲೇಔಟ್‌ನಲ್ಲಿ ವಿಸರ್ಜಿಸಲಾಯಿತು. ಸಂಘದ ಬಹುತೇಕ ಸದಸ್ಯರು ಮೆರವಣಿಗೆಯಲ್ಲಿ ಭಾಗವಹಿಸಿ ಮೆರವಣಿಗೆಗೆ ಮೆರುಗನ್ನು ನೀಡಿದರು.



ಶ್ರೀ ಸಿ. ರಾಜ ಭಾಸ್ಕರರವರು ದೇವರಿಗೆ ಬೆಳ್ಳಿಯ ತಟ್ಟೆಯನ್ನು ಸಮರ್ಪಿಸಿರುತ್ತಾರೆ ಇವರಿಗೆ ಸಂಘದ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ಹೃದಯಸ್ಪರ್ಶಿ ಧನ್ಯವಾದಗಳು.

ಶ್ರೀಮತಿ ಸರಳ ಉದಯ್ ಕುಮಾರ್ ಶೆಟ್ಟಿ ಚಪ್ಪರಮಕ್ಕಿ ಇವರು ಪ್ರಾರ್ಥನಾ ಮಂದಿರದ ಆವರಣಕ್ಕೆ ಇಂಟರ್‌ಲಾಕ್ ಅಳವಡಿಕೆಯನ್ನು ಮಾಡಿಸಿರುತ್ತಾರೆ ಇವರಿಗೆ ಸಂಘದ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಹೃತ್ಪೂರ್ವಕ ಧನ್ಯವಾದಗಳು.



ಪ್ರಾರ್ಥನಾ ಮಂದಿರಕ್ಕೆ ದೀಪಾಲಂಕಾರದ ವ್ಯವಸ್ಥೆಯನ್ನು ಕೊಡುಗೆಯಾಗಿ ನೀಡಿದ ಶ್ರೀ ಯು. ಲಕ್ಷ್ಮೀನಾರಾಯಣ ಶೆಟ್ಟಿ ಯವರಿಗೂ ಸಂಘದ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಹೃದಯಾಂತರಾಳದ ಧನ್ಯವಾದಗಳು.

**ದೇಣಿಗೆ ನೀಡಿ ಸಹಕರಿಸಿದವರು:**

| | | |
|---|---|---|
| ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ | ಶ್ರೀ ಸುಬ್ರಹ್ಮಣ್ಯ ಶೆಟ್ಟಿ | ಶ್ರೀಮತಿ ರಾಜಮ್ಮ ಹೆಗ್ಡೆ |
| ಶ್ರೀ ಕೆ. ಟಿ. ಸುಧಾಕರ ರೈ | ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ | ಶ್ರೀ ಎ. ಗಿರೀಶ್ ರೈ |
| ಸಿಎ. ಅಶೋಕ್ ಶೆಟ್ಟಿ ಎಂ. | ಶೀಲಾ ಎಕ್ವಿಪ್‌ಮೆಂಟ್ಸ್ ಪ್ರೈ.ಲಿ. | ಶ್ರೀ ಜಗನ್ನಾಥ ಶೆಟ್ಟಿ ಹೆಚ್. |
| ಶ್ರೀ ಮುರಲೀಧರ ಹೆಗ್ಡೆ | ಡಾ. ಜಗದೀಶ್ ವಿ. ಶೆಟ್ಟಿ | ಶ್ರೀಮತಿ ಜ್ಯೋತಿ ಶೆಟ್ಟಿ |
| ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ | ಶ್ರೀಮತಿ ಸುಜಾತ ಯು. ಹೆಗ್ಡೆ | ಶ್ರೀ ರವೀಂದ್ರ ಶೆಟ್ಟಿ |
| ಸಿಎ. ಕಿಶೋರ್ ಶೆಟ್ಟಿ | ಶ್ರೀ ರಮಿತ್ ಬಿ. ಶೆಟ್ಟಿ | ಶ್ರೀ ಶೇಖರ್ ಶೆಟ್ಟಿ |
| ಶ್ರೀ ಅರುಣ್ ಕುಮಾರ್ ಶೆಟ್ಟಿ | ಶ್ರೀ ಮಧುಕರ ಎಂ. ಶೆಟ್ಟಿ | ಶ್ರೀ ದೀಪಕ್ ಶೆಟ್ಟಿ |
| ಶ್ರೀ ಟಿ. ಶಿವಾನಂದ ಶೆಟ್ಟಿ | ಶ್ರೀ ಅಮರೇಶ್ ಶೆಟ್ಟಿ | ಶ್ರೀಮತಿ ರತ್ನಾ ಬಡಿಗಾರ್ |
| ಶ್ರೀ ಆನಂದರಾಮ ಶೆಟ್ಟಿ ಬಿ. | ಶ್ರೀಮತಿ ಮೀರಾ ವಿನಯ್ ಶೆಟ್ಟಿ | ಶ್ರೀ ರತ್ನಾಕರ ಶೆಟ್ಟಿ |
| ಶ್ರೀಮತಿ ರಂಜಿತಾ ಪ್ರವೀಣ್ ಶೆಟ್ಟಿ | ಶ್ರೀ ಭವಾನಿ ಪ್ರಸನ್ನ ಶೆಟ್ಟಿ | ಶ್ರೀ ಸಂತೋಷ್ ಶೆಟ್ಟಿ ಜೆ. |
| ಶ್ರೀ ಸಂತೋಷ್ ಕುಮಾರ್ ಶೆಟ್ಟಿ | ಶ್ರೀ ಶಾಂತರಾಮ ಶೆಟ್ಟಿ | ಸಿಎ. ವಿಜಯ್ ಶೆಟ್ಟಿ |
| ಶ್ರೀ ಜಯಶೀಲ್ ಶೆಟ್ಟಿ ಬೆಳ್ವೆ | ಶ್ರೀಮತಿ ಪುಷ್ಪಾ ಆನಂದ್ ಶೆಟ್ಟಿ | ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಎಂ. |
| ಶ್ರೀ ಸಂದೀಪ್ ಶೆಟ್ಟಿ | | |

**ನೇರ ಪ್ರಾಯೋಜಕತ್ವ ನೀಡಿ ಸಹಕರಿಸಿದವರು:–**

| | | |
|---|---|---|
| ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ | ಶ್ರೀ ಎ.ಎನ್. ಶೆಟ್ಟಿ | ಶ್ರೀ ಸುಧಾಕರ್ ಶೆಟ್ಟಿ ಕೂಲ್ ಕಾರ್ನರ್ |
| ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ. | ಶ್ರೀ ಅಜಿತ್ ವಿ. ಶೆಟ್ಟಿ | ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ. |

| | | |
|---|---|---|
| ಶ್ರೀ ಸುರೇಂದ್ರ ಶೆಟ್ಟಿ ಹಡಾಳಿ | ಶ್ರೀ ಡಿ. ಬಿ. ಪ್ರತಾಪ್ ಶೆಟ್ಟಿ | ಶ್ರೀ ರಮೇಶ್ ಜಿ. ಶೆಟ್ಟಿ |
| ಶ್ರೀಮತಿ ಶಕುಂತಲಾ ಶೆಟ್ಟಿ | ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್. | ಶ್ರೀಮತಿ ಸುಶ್ಮಿತಾ ಸನತ್ ಶೆಟ್ಟಿ |
| ಶ್ರೀ ಪ್ರದೀಪ್‌ರಾಜ್ ಶೆಟ್ಟಿ | ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ | ಶ್ರೀಮತಿ ಶ್ವೇತಾ ಸುನೀಲ್ ಶೆಟ್ಟಿ |
| ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ | ಶ್ರೀಮತಿ ಲಕ್ಷ್ಮಿ ಎ. ಶೆಟ್ಟಿ | ಶ್ರೀಮತಿ ಶೋಭಾ ಶೇಖ |

ಪೂಜಾ ಕಾರ್ಯಕ್ರಮದಲ್ಲಿ ಸಹಕರಿಸಿದ, ಭಾಗವಹಿಸಿದ ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು, ಪ್ರಸ್ತುತ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು, ನಮ್ಮ ಜೊತೆ ಸೇವೆ ಸಲ್ಲಿಸಿದ ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರುಗಳಿಗೆ ಮನದಾಳದ ವಂದನೆಗಳು. ಸದಾ ಪ್ರೋತ್ಸಾಹ ನೀಡಿದ ನಮ್ಮ ಭಜನೆ ತಂಡ ಮಕ್ಕಳು ಮತ್ತು ಪೋಷಕರಿಗೆ, ಪೂಜಾ ಸೇವೆಗಳನ್ನು ಸಲ್ಲಿಸಿದ ಭಕ್ತಾಧಿಗಳಿಗೆ ಧನ್ಯವಾದಗಳು.

**ಅನ್ನದಾನಕ್ಕೆ ಸಹಕರಿಸಿದ ಇತರ ಎಲ್ಲಾ ದಾನಿಗಳಿಗೂ ಧನ್ಯವಾದಗಳು.**

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಪ್ರಾರ್ಥನಾ ಸಮಿತಿಯ ಪರವಾಗಿ ಧನ್ಯವಾದಗಳು.
ಶ್ರೀ ವರಸಿದ್ಧಿ ವಿನಾಯಕನು ಎಲ್ಲರಿಗೂ ಆಯುರಾರೋಗ್ಯ ಭಾಗ್ಯವನ್ನಿತ್ತು ಕರುಣಿಸಲಿ.

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

## ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–2 – ಕೃಷ್ಣ ಜನ್ಮಾಷ್ಟಮಿ ಆಚರಣೆ



ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ಮಕ್ಕಳು ಕೃಷ್ಣ ಜನ್ಮಾಷ್ಟಮಿಯನ್ನು ಬಹಳ ಉತ್ಸಾಹದಿಂದ ಆಚರಿಸಿದರು. ಮಕ್ಕಳು ಮುದ್ದಾದ ಕೃಷ್ಣ ಮತ್ತು ಆಕರ್ಷಕ ರಾಧೆಯರಂತೆ ಉಡುಗೆ ತೊಟ್ಟು ಕಣ್ಮನ ಸೆಳೆದರು. ಆಚರಣೆಯು ಸುಮಧುರ ಭಜನೆಗಳು ಮತ್ತು ಶ್ರೀ ಕೃಷ್ಣನ ಬಾಲ್ಯದ ಕಥೆಗಳೊಂದಿಗೆ ಪ್ರಾರಂಭವಾಯಿತು. ದಿನದ ಪ್ರಮುಖ ಅಂಶವೆಂದರೆ ಉತ್ಸಾಹಭರಿತ “ದಹಿ ಹಂಡಿ” ಚಟುವಟಿಕೆ, ಅಲ್ಲಿ ನಮ್ಮ ಪುಟ್ಟ ಮಕ್ಕಳು ಉತ್ಸಾಹದಿಂದ ಭಾಗವಹಿಸಿದರು, ಚಪ್ಪಾಳೆ ತಟ್ಟಿದರು ಮತ್ತು ಉತ್ಸಾಹದಿಂದ ಹುರಿದುಂಬಿಸಿದರು. ಪ್ರೀತಿ, ಸ್ನೇಹ ಮತ್ತು ಭಕ್ತಿಯ ಮೌಲ್ಯಗಳ ಬಗ್ಗೆ ಮಕ್ಕಳು ಮೋಜಿನ ಮತ್ತು ಆಕರ್ಷಕ ರೀತಿಯಲ್ಲಿ ಕಲಿಯುವುದನ್ನು ನೋಡುವುದು ಒಂದು ಸಂತೋಷಕರ ಅನುಭವವಾಗಿತ್ತು. ಇಡೀ ಕಾರ್ಯಕ್ರಮವು ಆಧ್ಯಾತ್ಮಿಕ ಮತ್ತು ಸಂತೋಷದಾಯಕ ವಾತಾವರಣವನ್ನು ಸೃಷ್ಟಿಸಿತು. ಎಲ್ಲರಿಗೂ ನಗು ಮತ್ತು ಪ್ರೀತಿಯ ನೆನಪುಗಳನ್ನು ನೀಡಿತು.

# ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್‌ನ 28ನೇ ವಾರ್ಷಿಕೋತ್ಸವ




ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್‌ನ 28ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ 24.08.2025ನೇ ಭಾನುವಾರ ಬೆಳಿಗ್ಗೆ 11.00 ಘಂಟೆಗೆ ಬಂಟರ ಸಂಘದ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸದಸ್ಯರಾದ ಕುಮಾರಿ ಸಂಹಿತ ಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭಗೊಂಡು, ಉಪಾಧ್ಯಕ್ಷರಾದ ಶ್ರೀ ಹೆಚ್ ಶ್ರೀಧರ್ ಹೆಗ್ಡೆಯವರು ಸಹಕಾರಿ ಬಂಧುಗಳನ್ನು ಸಭೆಗೆ ಆಹ್ವಾನಿಸಿ **"ಸೌಹಾರ್ದ ಸಹಕಾರಿಯ ನಡೆ ಸುಸ್ಥಿರ ಅಭಿವೃದ್ಧಿಯ ಕಡೆ"** ಎಂಬ ಧ್ಯೇಯದಂತೆ ಪ್ರಾಸ್ತಾವಿಕ ನುಡಿಯಲ್ಲಿ ಸಂಸ್ಥೆಯ ಬೆಳವಣಿಗೆಗಳ ಬಗ್ಗೆ, ಪ್ರಸಕ್ತ ಸಾಲಿನಲ್ಲಿ ನಡೆದ ಕಾರ್ಯಕಲಾಪಗಳ ಬಗ್ಗೆ, ಸುಸ್ತಿ ಸಾಲದ ವಸೂಲಾತಿಗಳ ಅಂಕಿ ಅಂಶಗಳನ್ನು ನೀಡಿ ಬದಲಾದ ಉಪನಿಬಂಧನೆಗಳ ಪ್ರಕಾರ ಲಾಭಾಂಶ ವಿಂಗಡನೆಯಲ್ಲಿ ಮಾಡಲೇಬೇಕಾದ ಬದಲಾವಣೆಗಳ ಕುರಿತು ತಿಳಿಸಿ, ನೆರೆದಿದ್ದ ಸದಸ್ಯರ, ಗಣ್ಯರ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವೆಂದು ತಿಳಿಸುತ್ತಾ ಹಾಜರಾಗಿದ್ದ ಎಲ್ಲಾ ನಿರ್ದೇಶಕರುಗಳಿಗೆ, ಮಾಜಿ ನಿರ್ದೇಶಕರುಗಳಿಗೆ, ಸಹಕಾರಿಯ ವಕೀಲರುಗಳಾದ ಶ್ರೀ ಉದಯ್ ಶಂಕರ ರೈ, ಶ್ರೀ ವಿಠ್ಠಲ್ ಎಸ್ ರೈ ಮತ್ತು ಶ್ರೀ ಎಸ್ ಬಸವರಾಜುರವರಿಗೆ ಹಾಗೂ ಆಂತರಿಕ ಲೆಕ್ಕ ಪರಿಶೋಧಕರಾದ ಬಿ.ವಿ.ಸಿ ಅಂಡ್ ಕಂಪನಿರವರಿಗೆ ಮತ್ತು ಸನ್ನದ್ದು ಲೆಕ್ಕ ಪರಿಶೋಧಕರಾದ ಮೆ॥ ವೆಂಕಟಾಚಲ ರಾಘವೇಂದ್ರ ಅಂಡ್ ಕಂಪನಿರವರಿಗೆ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಹಕಾರಿ ಬಂಧುಗಳಿಗೆ ಆದರದ ಪ್ರೀತಿ ಪೂರ್ವಕ ಸ್ವಾಗತ ಕೋರಿದರು. ನಿರ್ದೇಶಕರಾದ ಶ್ರೀ ಡಿ ಚಂದ್ರಹಾಸ್ ರೈ ಯವರು ಪ್ರಸಕ್ತ ಸಾಲಿನಲ್ಲಿ ನಿಧನರಾಗಿರುವ ಸದಸ್ಯರಿಗೆ ಸಂತಾಪ ಸೂಚಿಸುವ ಕಾರ್ಯಕ್ರಮವನ್ನು ಒಂದು ನಿಮಿಷಗಳ ಕಾಲ ಮೌನ ಆಚರಿಸುವುದರೊಂದಿಗೆ ನಡೆಸಲಾಯಿತು. ವೇದಿಕೆಯಲ್ಲಿ ಉಪಸ್ಥಿತರಿದ್ದ ಸಂಘದ ಕಾರ್ಯದರ್ಶಿ ಶ್ರೀಮತಿ ಶೋಭ ಆರ್ ರವರು ಕಾರ್ಯಸೂಚಿಪಟ್ಟಿಗನುಗುಣವಾಗಿ ಮಹಾಸಭೆಗೆ ಎಲ್ಲಾ ಸೂಚನೆಗಳನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದರು. ಸದಸ್ಯರೆಲ್ಲರ ಸಹಕಾರದಿಂದ ಮಾತ್ರವೇ ಸಂಸ್ಥೆಯ ಸಮೃದ್ದಿ ಸಾಧ್ಯವೆಂಬ ಮಾತಿನೊಡನೆ ಅಧ್ಯಕ್ಷರಾದ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರು 2024–25 ನೇ ಸಾಲಿನ ಲಾಭದ ಹಂಚಿಕೆಯಲ್ಲಿ ಷೇರು ಬಂಡವಾಳದ ಮೇಲೆ 12% ಡಿವಿಡೆಂಡ್ ಘೋಷಣೆಯೊಂದಿಗೆ ಎಂದಿನಂತೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ನಂತರ ಅಧ್ಯಕ್ಷರು ಮಾತನಾಡಿ 28ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸದಸ್ಯರಿಗೂ ಗೌರವ ಪೂರ್ವಕವಾದ ಸ್ವಾಗತ ಮತ್ತು ಅಭಿನಂದನೆಗಳನ್ನು ತಿಳಿಸಿ ಅವರ ಅಧಿಕಾರದ ಅವಧಿಯಲ್ಲಿ ಪ್ರಗತಿ ಪಥದಲ್ಲಿ ಪ್ರಾಮಾಣಿಕ ಮತ್ತು ಪಾರದರ್ಶಕ ಸೇವೆ ನಡೆಸಿಕೊಂಡು ಬಂದಿದ್ದು ಸದಸ್ಯರ ಪ್ರೋತ್ಸಾಹ, ಸಿಬ್ಬಂದಿ ವರ್ಗದ ಸೇವಾ ಮನೋಭಾವ, ಲೆಕ್ಕ ಪರಿಶೋಧಕರು ಮತ್ತು ವಕೀಲರುಗಳ ಸಲಹೆ ಸಹಕಾರದೊಂದಿಗೆ ಮುನ್ನಡೆಯುತ್ತಿರುವ ಬಗ್ಗೆ ತಿಳಿಸಿ ಮತ್ತೊಮ್ಮೆ ಎಲ್ಲರಿಗೂ ವಂದನೆಗಳನ್ನು ತಿಳಿಸಿದರು. ನಂತರ ಸಭೆಯ ಕಾರ್ಯಕಲಾಪಗಳು ಕಾರ್ಯಸೂಚಿ ಪಟ್ಟಿಯಂತೆ ಮುಂದುವರೆದು ನಿರ್ದೇಶಕರಾದ ಶ್ರೀ ಡಿ. ಚಂದ್ರಹಾಸ್ ರೈಯವರು ಸಭೆಗೆ ಹಾಜರಾದ ಎಲ್ಲಾ ಸದಸ್ಯ ಬಾಂಧವರಿಗೂ ಧನ್ಯವಾದ ಸಮರ್ಪಣೆಯೊಂದಿಗೆ ಮುಕ್ತಾಯಗೊಂಡು ಸಾಗರ್ ಕ್ಯಾಟರರ್ಸ್‌ನವರಿಂದ ಆಯೋಜಿತವಾಗಿದ್ದ ಮಧ್ಯಾಹ್ನದ ಸಹಭೋಜನದೊಂದಿಗೆ ಸಭೆಯು ಯಶಸ್ವಿಯಾಗಿ ಸಂಪನ್ನಗೊಂಡಿತು.

# Annual Sports Meet – 2025




The Bunts'Sangha RNS Evening College proudly organized its Annual Sports Meet – 2025 on 26th July 2025 (Saturday) at the Bunts' Sangha RNS Campus, Vijayanagar, Bangalore. The much-awaited event was marked with energy, enthusiasm, and active participation from students.

The programme commenced with a welcome address by Mr. Ranith Shetty, Physical Education Director. The Sports Meet was inaugurated by the Honourable Treasurer of Bunts' Sangha, Bangalore, Sri Ashok Kumar Shetty, accompanied by Madam Principal Mrs. Shyamala Shetty. In her address, the Principal highlighted the importance of sports in fostering discipline, teamwork, and holistic development among students.

Following this, Sri Ashok Kumar Shetty delivered an inspiring speech by encouraging students to actively engage in sports and carry forward the spirit of healthy competition.

Under the guidance of Mr. Umesh Shetty, Physical Education Faculty, the sporting events were conducted smoothly. He served as the chief judge and mentor, ensuring fair play and enthusiastic participation. The students showcased their true sportsmanship in various events, creating moments of thrill and excitement.

The day witnessed wholehearted participation, by every student contributing to the vibrancy of the occasion. The atmosphere was filled with cheers, encouragement, and the spirit of togetherness.

The Annual Sports Meet – 2025 concluded with a vote of thanks and heartfelt gratitude to all who have contributed directly or indirectly towards the success of this mega sporting event.

# ಬಂಟರ ಸಂಘ ಬೆಂಗಳೂರು – ಸಾಂಸ್ಕೃತಿಕ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ – 2025–26

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 06.12.2025, ಶನಿವಾರ, ಮಧ್ಯಾಹ್ನ 02.00 ರಿಂದ,**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 30.11.2025**

**1. ರಂಗೋಲಿ (ಚುಕ್ಕಿ ರಂಗೋಲಿ) (Powder)**

ಕಾಲಾವಕಾಶ : 60 ನಿಮಿಷ
ವಯೋಮಿತಿ: ಎ) 16 ವರ್ಷದ ಒಳಗೆ
ಬಿ) 16 ವರ್ಷ ಮೇಲ್ಪಟ್ಟು

* ಸ್ಪರ್ಧಿಗಳ ಸಂಖ್ಯೆ 6 ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವಯೋಮಿತಿಯನ್ನು ಮುಕ್ತ ಎಂದು ಪರಿಗಣಿಸಲಾಗುವುದು

**2. ಚಿತ್ರ ಬಿಡಿಸುವುದು (DRAWING)**

ಕಾಲಾವಕಾಶ : 45 ನಿಮಿಷ
ವಯೋಮಿತಿ: ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು

**2. ರಸ ಪ್ರಶ್ನೆ (Quiz)**

ವಯೋಮಿತಿ: ಎ) 8 ವರ್ಷದ ಮೇಲ್ಪಟ್ಟು 15 ವರ್ಷದ ಒಳಗೆ
ಬಿ) 15 ವರ್ಷ ಮೇಲ್ಪಟ್ಟು

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 07.12.2025, ಭಾನುವಾರ, ಬೆಳಿಗ್ಗೆ 09.30 ರಿಂದ,**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 30.11.2025, ಯಾವುದೇ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕವಿರುವುದಿಲ್ಲ**

**1. ಛದ್ಮವೇಷ (FANCY DRESS)**

ಕಾಲಾವಕಾಶ : 2 ನಿಮಿಷ
ವಯೋಮಿತಿ: ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು

(ಹಿನ್ನೆಲೆ ಧ್ವನಿ/ ಸಂಗೀತವನ್ನು ಪರಿಗಣಿಸಲಾಗುವುದು)

**2. ಆಶು ಭಾಷಣ (PICK & SPEECH) – ಕನ್ನಡ / English**

ಕಾಲಾವಕಾಶ : 2 ನಿಮಿಷ
ವಯೋಮಿತಿ: ಎ) 6 ವರ್ಷ ಮೇಲ್ಪಟ್ಟು 10 ವರ್ಷದ ಒಳಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ
ಡಿ) 30 ವರ್ಷ ಮೇಲ್ಪಟ್ಟು (ಕಾಲಾವಕಾಶ 3 ನಿಮಿಷ)

**ಸಂಗೀತ (MUSIC )**

**ಎ. ಶಾಸ್ತ್ರೀಯ ಸಂಗೀತ–ಹಿಂದೂಸ್ಥಾನಿ/ಕರ್ನಾಟಕ–ಕಾಲಾವಕಾಶ 3 ನಿಮಿಷ (Shastriya Sangeetha (Hindustani/ Karnatic)**

**ವಯೋಮಿತಿ :** ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷದ ಮೇಲ್ಪಟ್ಟು

**ಬಿ. ಸುಗಮ ಸಂಗೀತ – ಕಾಲಾವಕಾಶ 2 ½ ನಿಮಿಷ**

**ಸಿ. ಸಿನಿಮಾ ಗೀತೆಗಳು (Film Song)– ಕಾಲಾವಕಾಶ 2 ½ ನಿಮಿಷ**

**ವಯೋಮಿತಿ :** ಎ) 6 ರಿಂದ 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು 25 ವರ್ಷದವರೆಗೆ
ಡಿ) 25 ವರ್ಷ ಮೇಲ್ಪಟ್ಟು

**ಡಿ. ಸಮೂಹ ಗಾನ (Group Song-Open for all- 3 members & above)**
ಕಾಲಾವಕಾಶ –2 ½ ನಿಮಿಷ
**(ಸಮೂಹ ಗಾನವನ್ನು ಹೊರತುಪಡಿಸಿ ಒಬ್ಬರಿಗೆ 2 ಸಂಗೀತ ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶ)**

**ದಿನಾಂಕ 21.12.2025, ಭಾನುವಾರ, ಬೆಳಿಗ್ಗೆ 9.30 ರಿಂದ,**
**ಸ್ಥಳ : ಬಂಟರ ಸಂಘದ ಆವರಣ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 10.12.2025**

**1. ನೃತ್ಯ (Dance)**

1. ಶಾಸ್ತ್ರೀಯ ನೃತ್ಯ (Indian Classical Solo)
2. ಜಾನಪದ ನೃತ್ಯ (Folk Solo)
3. ಫ್ರೀ ಸ್ಟೈಲ್ (Free- Style –Solo)
4. ಸಮೂಹ ನೃತ್ಯ (Group Dance -3 members & above- open)

| **ವಯೋಮಿತಿ** | **ಕಾಲಾವಕಾಶ** |
|---|---|
| ಎ) 6 ವರ್ಷ ಮೇಲ್ಪಟ್ಟು 10 ವರ್ಷದ ವರೆಗೆ | 2 + 1 ನಿಮಿಷ |
| ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ | 2 + 1 ನಿಮಿಷ |
| ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ | 2 + 1 ನಿಮಿಷ |
| ಡಿ) 30 ವರ್ಷದ ಮೇಲ್ಪಟ್ಟು | 2 + 1 ನಿಮಿಷ |
| ಇ) ಸಮೂಹ ನೃತ್ಯ (ಮುಕ್ತ) | 2 + 1 ನಿಮಿಷ |

**(ಶಾಸ್ತ್ರೀಯ ನೃತ್ಯಕ್ಕೆ ಕಾಲಾವಕಾಶ – 3 +1 ನಿಮಿಷ)**
**(ಸಮೂಹ ನೃತ್ಯವನ್ನು ಹೊರತುಪಡಿಸಿ ಒಬ್ಬರಿಗೆ 2 ನೃತ್ಯ ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶ)**
**ಅಂತ್ಯಾಕ್ಷರಿ – ಹಿಂದಿ ಮತ್ತು ಕನ್ನಡ (Anthakshari – Hindi & Kannada) – ಸಂಜೆ 5.00 ರಿಂದ**
ವಯೋಮಿತಿ: ಮುಕ್ತ (ಪ್ರತೀ ತಂಡಕ್ಕೆ 3 ಸದಸ್ಯರು)

**ಹೆಚ್ಚಿನ ಮಾಹಿತಿಗಾಗಿ ಸಾಂಸ್ಕೃತಿಕ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು**

| | | |
|---|---|---|
| ರಮೇಶ್ ಜಿ ಶೆಟ್ಟಿ : 9611648717 | ಸಂತೋಷ್ ಶೆಟ್ಟಿ : 9035429265 | ನಮ್ರತ ಶೆಟ್ಟಿ : 8884835865 |
| ಪ್ರತಿಮ ಶೆಟ್ಟಿ : 9164136726 | ಸುಮ ಎನ್ ಶೆಟ್ಟಿ : 9916489042 | ಅಂಬಿಕಾ ವಿ ಶೆಟ್ಟಿ : 9035429265 |
| ರೇಷ್ಮಾ ಶೆಟ್ಟಿ : 9845563881 | ಜಯಲಕ್ಷ್ಮಿ ಶೆಟ್ಟಿ : 9663250130 | |
| ಸಂಘದ ಕಛೇರಿ : 080–23399323 / 23399636 / 7022119739 | | |

- ಎಲ್ಲಾ ಸ್ಪರ್ಧೆಗಳು ನಿಗದಿಪಡಿಸಿದ ಸಮಯದಲ್ಲೇ ನಡೆಯುವುದು. ಸ್ಪರ್ಧಿಗಳು ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ತಮ್ಮ ಹಾಜರಾತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- **ಯಾವುದೇ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ.**
- **ನಿಗದಿತ (ಕೊನೆಯ) ದಿನಾಂಕದ ನಂತರ ಬಂದ ನೋಂದಣಿಗಳನ್ನು ಸ್ವೀಕರಿಸಲಾಗುವುದಿಲ್ಲ** ಹಾಗೂ ಸ್ಪರ್ಧೆಯ ದಿನದಂದು ಯಾವುದೇ ರೀತಿಯ ನೋಂದಾವಣೆ ಇರುವುದಿಲ್ಲ. ಸ್ಪರ್ಧೆ ತಡರಾತ್ರಿಯವರೆಗೆ ನಡೆದು ಸ್ಪರ್ಧಿಗಳಿಗೆ ಹಾಗೂ ತೀರ್ಪುಗಾರರಿಗೆ ಅನಾನುಕೂಲವಾಗದಂತೆ ಮಾಡಲು ನಿಗದಿತ ದಿನಾಂಕದ ಮೊದಲು ನೋಂದಣಿ ಕಡ್ಡಾಯ.
- ಯಾವುದೇ ಸ್ಪರ್ಧೆಯಲ್ಲಿ ಮೂರು ಸ್ಪರ್ಧಿಗಳು ಮತ್ತು ಅದಕ್ಕಿಂತ ಕಮ್ಮಿ ಇದ್ದರೆ ಒಂದು ಬಹುಮಾನ, ಮೂರರಿಂದ ಆರು ಸ್ಪರ್ಧಿಗಳು ಭಾಗವಹಿಸಿದ್ದಲ್ಲಿ ಕೇವಲ ಎರಡು ಬಹುಮಾನಗಳು ಮತ್ತು ಆರಕ್ಕಿಂತ ಹೆಚ್ಚು ಸ್ಪರ್ಧಿಗಳು ಇದ್ದಲ್ಲಿ ಮೂರು ಬಹುಮಾನ ನೀಡಲಾಗುವುದು.

**ಈ ಎಲ್ಲಾ ಸ್ಪರ್ಧೆಗಳಿಗೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸಂತೋಷ್ ಶೆಟ್ಟಿ ತಲೇಕಳ**
ಸಂಚಾಲಕರು, ಸಾಂಸ್ಕೃತಿಕ ಸಮಿತಿ
ಮೊ.: 90354 29265

**ರಮೇಶ್ ಜಿ. ಶೆಟ್ಟಿ**
ಚೇರ್‌ಪರ್ಸನ್, ಸಾಂಸ್ಕೃತಿಕ ಸಮಿತಿ
ಮೊ.: 96116 48717

## Academic Excellence Congratulations!
## SSLC Toppers



**Sanvi S. Shetty**
D/o Sathish Shetty & Vijayalakshmi S. Shetty
**SSLC -98.88%**
**Sri Aurobindo Vidya Mandir**
**Sanskrit - 125, Kannada - 100,**
**Mathematics - 100**



**Janmitha S. Shetty**
D/o Shivananda Shetty & Sandhya S. Shetty
**CBSE -94.6%**
**Bunts Sangha RNS Vidyaniketan,**
**Vijayanagar**

**ಬಂಟರ ಸಂಘ ಬೆಂಗಳೂರು**

## ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2025–26

**ಆತ್ಮೀಯ ಸದಸ್ಯರೇ,**

2025–26ನೇ ಸಾಲಿನ **'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'**ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

## ಕ್ರೀಡಾಕೂಟದ ವಿವರ

| | | | |
|---|---|---|---|
| ಅಕ್ಟೋಬರ್ 12 ಭಾನುವಾರ | ಕ್ರೀಡಾಜ್ಯೋತಿ, ಉದ್ಘಾಟನೆ ಮತ್ತು ಅಥ್ಲೆಟಿಕ್ಸ್ | ಬೆಳಿಗ್ಗೆ 8.30ಕ್ಕೆ | ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಸಾಯಿ ಗ್ರೌಂಡ್, ಜ್ಞಾನಭಾರತಿ, ಬೆಂಗಳೂರು |
| ನವೆಂಬರ್ 9 ಭಾನುವಾರ | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 8.30ಕ್ಕೆ | ಅರ್ರೈಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ, ಬೆಂಗಳೂರು |
| ನವೆಂಬರ್ 23 ಭಾನುವಾರ | ಚೆಸ್, ಕೇರಂ, ಟೆನ್ನಿಕ್ವಾಟ್, ಟೇಬಲ್ ಟೆನ್ನಿಸ್ ಹಾಗೂ ವಾಲಿಬಾಲ್ | ಬೆಳಿಗ್ಗೆ 9.00ಕ್ಕೆ | ಬಂಟರ ಸಂಘ ಮತ್ತು ಬಿ.ಎಸ್.ಆರ್.ಎನ್.ಎಸ್. ವಿದ್ಯಾನಿಕೇತನ–I ರ ಸಂಕೀರ್ಣ |
| ಡಿಸೆಂಬರ್ 13 ಮತ್ತು 14 ಶನಿವಾರ ಮತ್ತು ಭಾನುವಾರ | ಪುರುಷರ ಕ್ರಿಕೆಟ್ ಪಂದ್ಯಾಟ | ಬೆಳಿಗ್ಗೆ 8.00ಕ್ಕೆ | ಹೆಚ್.ಎಮ್.ಟಿ. ಮೈದಾನ, ಜಾಲಹಳ್ಳಿ, ಬೆಂಗಳೂರು |
| ಡಿಸೆಂಬರ್ 14 ಭಾನುವಾರ | ಮಹಿಳೆಯರ ಕ್ರಿಕೆಟ್ ಪಂದ್ಯಾಟ | ಬೆಳಿಗ್ಗೆ 8.00ಕ್ಕೆ | ಹೆಚ್.ಎಮ್.ಟಿ. ಮೈದಾನ, ಜಾಲಹಳ್ಳಿ, ಬೆಂಗಳೂರು |

ಬೆಂಗಳೂರು ಬಂಟರ ಸಂಘದ 2025–26ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸಬನ್ ಶೆಟ್ಟಿ ಗುಡಿಬೆಟ್ಟು**
ಸಂಚಾಲಕರು, ಕ್ರೀಡಾ ಸಮಿತಿ
ಮೊ.: 9740923868

**ಸುರೇಂದ್ರ ಶೆಟ್ಟಿ ಹಡಾಳಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ.: 9620386172

**ಸೂಚನೆ:**

- ಶಟಲ್ ಬ್ಯಾಡ್ಮಿಂಟನ್ ಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ: 07.11.2025ನೇ ಶುಕ್ರವಾರ ಸಂಜೆ 6.00 ರ ಒಳಗೆ.
- ವಾಲಿಬಾಲ್ ಪಂದ್ಯಾವಳಿಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ: 21.11.2025ನೇ ಶುಕ್ರವಾರ ಸಂಜೆ 6.00 ರ ಒಳಗೆ.
- ಕ್ರಿಕೆಟ್ ಪಂದ್ಯಾವಳಿಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ: 01.12.2025 ನೇ ಸೋಮವಾರ ಸಂಜೆ 6.00 ರ ಒಳಗೆ.

ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು.

| | | |
|---|---|---|
| ಸುಚಿನ್ ಶೆಟ್ಟಿ : 8904378046 | ಶರತ್ ಶೆಟ್ಟಿ : 9591295959 | ರವೀಂದ್ರ ಶೆಟ್ಟಿ : 9535655822 |
| ಅಶ್ವಿನಿ ಶೆಟ್ಟಿ : 7795199583 | ನವೀನ್ ಶೆಟ್ಟಿ : 9844226700 | ಅಶೋಕ್ ಶೆಟ್ಟಿ : 9880420959 |
| ಸಚಿನ್ ಶೆಟ್ಟಿ : 9880982967 | ಮನೋಜ್ ಶೆಟ್ಟಿ : 9902789251 | ಹರೀಶ್ ಶೆಟ್ಟಿ : 9740002710 |
| ನಿತಿನ್ ಶೆಟ್ಟಿ : 9071121952 | ಅಜಿತ್ ಶೆಟ್ಟಿ : 9741077729 | ನಾಗರಾಜ್ ಶೆಟ್ಟಿ : 9663828719 |
| ಗಣೇಶ್ ಶೆಟ್ಟಿ : 9008995720 | ಸುಮಂತ್ ಶೆಟ್ಟಿ : 9591066094 | ಸುಭಾಷ್ ಶೆಟ್ಟಿ : 9972283789 |
| ಸುಜೇಂದ್ರ ಕುಮಾರ್ ಶೆಟ್ಟಿ : 9844444046 | ನಿತಿನ್ ಶೆಟ್ಟಿ : 9964768678 | ಶಶಿರಾಜ್ ಶೆಟ್ಟಿ : 9611981263 |
| ಶರಣು ಕುಮಾರ್ ಶೆಟ್ಟಿ : 9663899206 | ರಘುರಾಮ್ ಶೆಟ್ಟಿ : 8050776115 | |

## ಅಥ್ಲೆಟಿಕ್ಸ್

| | |
|---|---|
| ಸ್ಥಳ | : ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಸಾಯಿ ಗ್ರೌಂಡ್, ಜ್ಞಾನಭಾರತಿ, ಬೆಂಗಳೂರು |
| ದಿನಾಂಕ | : 12.10.2025, ಭಾನುವಾರ, ಬೆಳಿಗ್ಗೆ 8.30ಕ್ಕೆ |
| ಪ್ರವೇಶ ಶುಲ್ಕ | : ರೂ. 50/– ಪ್ರತಿ ಸ್ಪರ್ಧೆಗೆ |

| ವಯೋಮಿತಿ | ವಯೋಮಿತಿ |
|---|---|
| **6 ವರ್ಷ ಕೆಳಗಿನವರಿಗೆ** : 50 ಮೀಟರ್ ಓಟ<br>(ಪ್ರವೇಶ ಶುಲ್ಕ ಇರುವುದಿಲ್ಲ)<br>ಕಪ್ಪೆ ಜಿಗಿತ (Frog Jump) । ಚಾಕೋಲೇಟ್ ಸಂಗ್ರಹ<br><br>**6 ವರ್ಷ ಮೇಲ್ಪಟ್ಟು 10 ವರ್ಷದ ಕೆಳಗಿನವರಿಗೆ** :<br>100 ಮೀಟರ್ ಓಟ (ಪ್ರವೇಶ ಶುಲ್ಕ ಇರುವುದಿಲ್ಲ)<br>50 ಮೀಟರ್ ಓಟ । ಪೊಟ್ಯಾಟೋ ಓಟ<br><br>**10 ವರ್ಷ ಮೇಲ್ಪಟ್ಟು 14 ವರ್ಷದ ಕೆಳಗಿನವರಿಗೆ** :<br>100 ಮೀಟರ್ ಓಟ<br>(ಪ್ರವೇಶ ಶುಲ್ಕ ಇರುವುದಿಲ್ಲ)<br>50 ಮೀಟರ್ ಓಟ । ಉದ್ದ ಜಿಗಿತ | **36 ವರ್ಷ ಮೇಲ್ಪಟ್ಟು 47 ವರ್ಷದ ಕೆಳಗಿನವರಿಗೆ (ಮಹಿಳೆಯರಿಗೆ )** : 400 ಮೀಟರ್ ಓಟ<br>ಲೆಮನ್ ಮತ್ತು ಸ್ಪೂನ್ ಸ್ಪರ್ಧೆ<br>ಗುಂಡು ಎಸೆತ (Shot Put) |
| **14 ವರ್ಷ ಮೇಲ್ಪಟ್ಟು 18 ವರ್ಷದ ಕೆಳಗಿನವರಿಗೆ** :<br>100 ಮೀಟರ್ ಓಟ । 200 ಮೀಟರ್ ಓಟ<br>400 ಮೀಟರ್ ಓಟ । ಉದ್ದ ಜಿಗಿತ (Long Jump)<br>ಗುಂಡು ಎಸೆತ (Shot Put) | **47 ವರ್ಷ ಮೇಲ್ಪಟ್ಟು 60 ವರ್ಷದ ಕೆಳಗಿನವರಿಗೆ** :<br>400 ಮೀಟರ್ ಓಟ<br>**ಪುರುಷರಿಗೆ** : ಗುಂಡು ಎಸೆತ (Shot Put)<br>**ಮಹಿಳೆಯರಿಗೆ** : 400 ಮೀಟರ್ ಓಟ । 'ಬಾಲ್‌ತ್ರೋ'<br>ಲೆಮನ್ ಮತ್ತು ಸ್ಪೂನ್ ಸ್ಪರ್ಧೆ |
| **18 ವರ್ಷ ಮೇಲ್ಪಟ್ಟು 26 ವರ್ಷದ ಕೆಳಗಿನವರಿಗೆ** :<br>100 ಮೀಟರ್ ಓಟ । 200 ಮೀಟರ್ ಓಟ<br>400 ಮೀಟರ್ ಓಟ । ಗುಂಡು ಎಸೆತ (Shot Put)<br>ಉದ್ದ ಜಿಗಿತ (Long Jump) | **60 ವರ್ಷ ಮೇಲಿನವರಿಗೆ** :<br>400 ಮೀಟರ್ ಓಟ / ನಡಿಗೆ<br>(ಪ್ರವೇಶ ಶುಲ್ಕ ಇರುವುದಿಲ್ಲ)<br>**(ಪುರುಷರಿಗೆ)** : 'ಬಾಲ್‌ತ್ರೋ'<br>**ಮಹಿಳೆಯರಿಗೆ** : 400 ಮೀಟರ್ ಓಟ<br>'ಬಾಲ್‌ತ್ರೋ' |

| ವಯೋಮಿತಿ | ವಯೋಮಿತಿ |
|---|---|
| **26 ವರ್ಷ ಮೇಲ್ಪಟ್ಟು 36 ವರ್ಷದ ಕೆಳಗಿನವರಿಗೆ :**<br>100 ಮೀಟರ್ ಓಟ । 200 ಮೀಟರ್ ಓಟ<br>400 ಮೀಟರ್ ಓಟ । ಗುಂಡು ಎಸೆತ (Shot Put)<br>ಉದ್ದ ಜಿಗಿತ (Long Jump)<br>**36 ವರ್ಷ ಮೇಲ್ಪಟ್ಟು 47 ವರ್ಷದ ಕೆಳಗಿನವರಿಗೆ :** 100 ಮೀಟರ್ ಓಟ (ಪುರುಷರಿಗೆ) 200 ಮೀಟರ್ ಓಟ<br>400 ಮೀಟರ್ ಓಟ । ಗುಂಡು ಎಸೆತ (Shot Put) | 4 x 100 ಮೀಟರ್ ರಿಲೇ :<br>**ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ**<br>18 ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ.<br>ಹಗ್ಗ ಜಗ್ಗಾಟ (Tug of War) : ಮಹಿಳೆಯರಿಗೆ ಹಾಗೂ ಪುರುಷರಿಗೆ 18 ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ.<br>Fun Games : ಎಲ್ಲಾ ವಯೋಮಿತಿಯವರಿಗೆ (ಸಮಯವಿದ್ದರೆ ಮಾತ್ರ) |

**ವಿ.ಸೂ:– ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯವಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ನೀಡತಕ್ಕದ್ದು. ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.**

**ಸೂಚನೆ:**

1. ಎಲ್ಲಾ ಸ್ಪರ್ಧಿಗಳು, ಸ್ಪರ್ಧೆಗೆ ಒಂದು ಗಂಟೆ ಮುಂಚಿತವಾಗಿ ಸ್ಥಳದಲ್ಲಿ ಹಾಜರಿದ್ದು, ಶುಲ್ಕವನ್ನು ನೀಡಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು.
2. ಸ್ಪರ್ಧಾಳುಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು. ಅಗತ್ಯವಿದ್ದಲ್ಲಿ ಪ್ರಮಾಣ ಪತ್ರದ / ದಾಖಲೆಯ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
3. ಪ್ರತಿಯೊಂದು ಸ್ಪರ್ಧೆಗೂ ಕನಿಷ್ಠ 4 ಸ್ಪರ್ಧಿಗಳು ಇರಲೇಬೇಕು.
4. ಎಲ್ಲಾ ವಯೋಮಿತಿಯಲ್ಲೂ ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ.
5. 10 ವರ್ಷ ವಯೋಮಿತಿಯ ಕೆಳಗೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಪ್ರವೇಶ ಶುಲ್ಕ ಇರುವುದಿಲ್ಲ.
